ಈ) ಈ ಯೋಜನೆಯು ಸಮರ್ಪಕವಾಗಿ ನಡೆಯದ ಕಾರಣ ಸರ್ಕಾರವು ಗೋವಾ ವಿಮೋಚನಾ ಚಳುವಳಿಯಲ್ಲಿ ಭಾಗವಹಿಸಿದ ಹೋರಾಟಗಾರರಿಗೆ ಗೌರವಧನ ಮಂಜೂರು ಮಾಡುವುದನ್ನು ದಿನಾಂಕ 5.4.1993ರಿಂದ ನಿಲ್ಲಿಸಿದೆ.

ದಕ್ಷಿಣ ಕನ್ನಡ ಜಿಲ್ಲಾ ಪೋಲೀಸ್ ಮೀಸಲು ಪಡೆಯ ಸಂಖ್ಯೆಯನ್ನು ಹೆಚ್ಚಿಸಲು ಒತ್ತಾಯ

227 - ಶ್ರೀ ಎನ್. ಯೋಗೀಶ್ ಭಟ್ (ಮಂಗಳೂರು) : ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪೋಲೀಸ್ ಇಲಾಖೆಯಲ್ಲಿ ದಕ್ಷಿಣ ಕನ್ನಡ ಜಿಲ್ಲಾ ಮೀಸಲು ಪಡೆಯ ಸಂಖ್ಯೆಯನ್ನು ಹೆಚ್ಚಿಸಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು;

ಆ) ಕಾನೂನು ಬದ್ಧವಾಗಿ ಪೋಲೀಸ್ ಅಧಿಕಾರಿಗಳಿಗೆ ಹಾಗೂ ಇನ್ನಿತರ ಅಧಿಕಾರಿಗಳಿಗೆ ಎಷ್ಟು ಜನ ಆರ್ಡರ್‌ಲ್‌ಗಳನ್ನು ಮನೆಯಲ್ಲಿ ಇಡಲು ಅಧಿಕಾರ ಇದೆ.

ಇ) ಈ ನಿಯಮದ ಪ್ರಕಾರ ಪ್ರಸ್ತುತ ಎಷ್ಟು ಜನ ಅಧಿಕಾರಿಗಳು ಈ ನಿಯಮವನ್ನು ಪಾಲಿಸುತ್ತಿದ್ದಾರೆ, ಪಾಲಿಸದಿದ್ದಲ್ಲಿ ಅದನ್ನು ಸರಿಪಡಿಸಲು ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ. ಈ ಬಗ್ಗೆ ಗುಪ್ತ ಮಾಹಿತಿಯನ್ನು ಸಂಗ್ರಹಿಸಲಾಗುತ್ತಿದೆಯೇ;

ಈ) ಬೇರೆ ರಾಜ್ಯಗಳ ಒಂದಂಕಿ ಲಾಟರಿಯನ್ನು ರದ್ದು ಗೊಳಿಸುವ ವಿಚಾರ ಸರ್ಕಾರಕ್ಕಿದೆಯೇ, ಹಾಗಿದ್ದಲ್ಲಿ ಯಾವ ಸಮಯದೊಳಗೆ ರದ್ದು ಗೊಳಿಸುತ್ತದೆ. ರದ್ದುಗೊಳಿಸದಿದ್ದಲ್ಲಿ ಮಾರಾಟ ಮಾಡಲು ನಿಬಂಧನೆಗಳೇನಾದರೂ ಹಾಕುತ್ತೀರಾ.

ಉ) ಕ್ಯಾಬರೇ, ಜುಗಾರಿ ಕಟ್ಟಾ ರೌಡಿಗಳನ್ನು ನಿಯಂತ್ರಿಸಲಾಗುವುದೆಂದು ಹೇಳಿಕೆ ನೀಡಲಾಗಿದೆ ಇಷ್ಟರತನಕ ತೆಗೆದುಕೊಂಡ ಕ್ರಮಗಳೇನು, ಇದು ತಾತ್ಕಾಲಿಕವೂ ಅಥವಾ ಸತತವಾಗಿ ತೆಗೆದುಕೊಳ್ಳಲಾಗುವುದೊ.

ಊ) ಮಂಗಳೂರಿನಲ್ಲಿರುವ ಸಬ್ ಜೈಲು ಹಾಗೂ ಸಿಬ್ಬಂದಿಗಳ ಗೃಹಗಳು ಕಳೆದ 15 ವರ್ಷಗಳಿಂದ ಯಾವುದೇ ದುರಸ್ತಿ ಇಲ್ಲದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ, ಬಂದಿದ್ದಲ್ಲಿ ಒಳಚರಂಡಿ ಅವ್ಯವಸ್ಥೆ, ಕುಡಿಯುವ ನೀರಿನ ಸಮಸ್ಯೆ, ಅಡುಗೆ ಕೋಣೆಯನ್ನು ನವೀಕರಿಸುವ ವ್ಯವಸ್ಥೆ, ಮಾಡಿನ ದುರಸ್ತಿ, ಗೋಡೆಗಳಿಗೆ ಸುಣ್ಣ ಬಳಿಯುವುದು ಇತ್ಯಾದಿಗಳನ್ನು ಮಾಡಲು ತಕ್ಷಣ ಕ್ರಮ ಕೈಗೊಳ್ಳುವುದೇ?

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಗೃಹ ಸಚಿವರು) :

ಅ) 1994-95ನೇ ಸಾಲಿಗಾಗಿ 12 ಪ್ಲಟೂನ್‌ಗಳ ಸಶಸ್ತ್ರ ಸಿಬ್ಬಂದಿಯನ್ನು ಮಂಜೂರು ಮಾಡಲು ಹಾಗೂ ಅದರಲ್ಲಿ ಒಂದು ಪ್ಲಟೂನ್ ಸಿಬ್ಬಂದಿಯನ್ನು ದಕ್ಷಿಣ ಕನ್ನಡ ಜಿಲ್ಲೆಗೆ ಕೊಡಲು ಉದ್ದೇಶಿಸಲಾಗಿದೆ.

ಅ) 1) ಡಿಜಿಪಿ:ಅಡಿಷನಲ್ ಡಿಜಿಪಿ:ಐಜಿಪಿ -1 ಹೆಚ್‌ಸಿ, 3 ಪಿಸಿ.

2) ಪೋಲೀಸ್ ಕಮೀಷನರ್ ಹಾಗೂ ಡಿಐಜಿಪಿ ರವರಿಗೆ -1 ಹೆಚ್‌ಸಿ, 2 ಪಿಸಿ.

3) ಎಸ್‌ಪಿ ಮತ್ತು ತತ್ಸಮಾನ ಹುದ್ದೆ - 3 ಪಿಸಿ.

4) ಡಿವೈ. ಎಸ್‌ಪಿ ಮತ್ತು ತತ್ಸಮಾನ ಹುದ್ದೆ -2 ಪಿಸಿ

5) ಪೋಲೀಸ್ ಇನ್ಸ್‌ಪೆಕ್ಟರ್ ಮತ್ತು ತತ್ಸಮಾನ ಹುದ್ದೆ -1 ಪಿಸಿ.

ಇ) ಈ ಮೇಲಿನ ನಿಯಮವನ್ನು ಕಟ್ಟುನಿಟ್ಟಾಗಿ ಪಾಲಿಸಲಾಗುತ್ತಿದೆ.

ಈ) ರಾಜ್ಯಾದ್ಯಂತ ಕರ್ನಾಟಕ ರಾಜ್ಯವು ಸೇರಿದಂತೆ ಬೇರೆ ಯಾವ ರಾಜ್ಯಗಳ ಒಂದಂಕಿ ಲಾಟರಿಯನ್ನು ನಡೆಸದಂತೆ ನಿಷೇಧಿಸಲಾಗಿದೆ.

ಉ) ಕ್ಯಾಬರೆ, ಜುಗಾರಿ ಕಟ್ಟಾ ರೌಡಿಗಳ ಚಟುವಟಿಕೆಯನ್ನು ರಾಜ್ಯದಾದ್ಯಂತ ಬಹುತೇಕ ನಿಯಂತ್ರಿಸಲಾಗಿದೆ. 1993ನೇ ಸಾಲಿನಲ್ಲಿ 797, 1994ರಲ್ಲಿ 1431 ಹಾಗೂ 1995ನೇ ಫೆಬ್ರವರಿ ಅಂತ್ಯದವರೆಗೆ 518 ಮಟ್ಕಾ ಪ್ರಕರಣಗಳನ್ನು ದಾಖಲು ಮಾಡಿಕೊಳ್ಳಲಾಗಿದೆ. ಇದೇ ರೀತಿ ಗೂಂಡಾಗಿರಿ ಆರೋಪದ ಮೇಲೆ ಬೆಂಗಳೂರು ನಗರದಲ್ಲಿ 316, ಮೈಸೂರು ನಗರದಲ್ಲಿ 120 ಗೂಂಡಾ ವ್ಯಕ್ತಿಗಳನ್ನು ಬಂಧಿಸಿ ಕ್ರಮ ಕೈಗೊಳ್ಳಲಾಗಿದೆ.

ಕ್ಯಾಬರೆಗೆ ಸಂಬಂಧಿಸಿದಂತೆ ಬೆಂಗಳೂರು ನಗರದಲ್ಲಿ 10 ಪ್ರಕರಣಗಳನ್ನು ದಾಖಲಿಸಿಕೊಂಡು ಕ್ರಮ ಕೈಗೊಂಡಿದೆ.

ಮಟ್ಕಾ ಮತ್ತು ಜೂಜಾಟವನ್ನು ತಡೆಗಟ್ಟುವ ಸಲುವಾಗಿ ರಾಜ್ಯದಾದ್ಯಂತ ವಿಶೇಷ ದಾಳಿಯನ್ನು ನಡೆಸಲಾಗುತ್ತಿದೆ.

ಊ) ಈ ಪ್ರಶ್ನೆ ಗೃಹ ಸಚಿವರಿಗೆ ಸಂಬಂಧಪಡುವುದಿಲ್ಲ.

ಸಾರ್ವಜನಿಕರು ಧ್ವನಿವರ್ದಕಗಳನ್ನು ಬಳಸುವುದರ ಬಗ್ಗೆ

228 - ಶ್ರೀ ಹೆಚ್. ಎನ್. ನಂಜೇಗೌಡ (ಬಸವನಗುಡಿ) : ಮಾನ್ಯ ಗೃಹಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸಾರ್ವಜನಿಕರು ವಿವೇಚನೆಯಿಲ್ಲದೇ ಧ್ವನಿವರ್ಧಕಗಳನ್ನು ಬಳಸುವ ಬಗ್ಗೆ ಸರಹದ್ದಿನ ಪೋಲೀಸರು ಪೋಲೀಸ್ ಕಾಯಿದೆಯನ್ನು ಬಳಸಿ, ಸೂಕ್ತ ಕ್ರಮ ತೆಗೆದುಕೊಳ್ಳುತ್ತಿಲ್ಲ ಎಂಬ ವಿಷಯವು ನಿಜವೇ;

ಆ) ಧಾರ್ಮಿಕ ಸಂಸ್ಥೆಗಳು ಧ್ವನಿವರ್ಧಕಗಳನ್ನು ಹಗಲು ರಾತ್ರಿ ಬಳಸಲು ಪೋಲೀಸ್ ಕಾಯಿದೆಯಲ್ಲಿ ಯಾವುದೇ ರಿಯಾಯಿತಿಗಳಿವೆಯೇ;

ಇ) ಪೋಲೀಸ್ ಕಾಯ್ದೆಯನ್ವಯ, ಧ್ವನಿವರ್ಧಕಗಳನ್ನು ವಿವೇಚನೆಯಿಲ್ಲದೆ ಬಳಕೆ ನಿಯಂತ್ರಿಸಲು, ಶಿಸ್ತಿನ ಕ್ರಮವನ್ನು ಪೋಲೀಸರು ಆಚರಿಸುತ್ತಿದ್ದಾರೆಯೇ?